**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯಃ ಕೊಪ್ಪ</u>**

<u>ಸಿ.ಸಿ. ನಂ.*646/2024*</u>

***<u>ಫಿರ್ಯಾದುದಾರರುಃ</u>***: ಸರ್ಕಾರದ ಪರವಾಗಿ ಹರಿಹರಪುರ ಪೊಲೀಸರು

**ವಿರುದ್ಧ**

***<u>ಆರೋಪಿತರುಃ</u>***

1. ಮಹಮ್ಮದ್ ರೌಫ್ ಎ. ಬಿನ್ ಅಬ್ದುಲ್ ರಜಾಕ್, 23 ವರ್ಷ, ಇನ್ಸೂರೆನ್ಸ್ ಏಜೆಂಟ್ ಕೆಲಸ, ವಾಸ ನೇತಾಜಿ ನಗರ, ಭಾರತ್ ರೈಸ್ ಮಿಲ್ ರಸ್ತೆ, ಕೊಪ್ಪ.
2. ಮಹಮ್ಮದ್ ಇರ್ಫಾನ್ ಬಿನ್ ಇಸ್ಮಾಯಿಲ್, **(ಪ್ರಕರಣವನ್ನು ಪ್ರತ್ಯೇಕಿಸಲಾಗಿದೆ)**

**<u>ದೋಷಾರೋಪಣೆ</u>**

ಶ್ರೀಮತಿ ನಂದಿನಿ ಎಂ.ಎನ್., ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

*2021* ನೇ ಸಾಲಿನಲ್ಲಿ *1* ನೇ ಆರೋಪಿ ಮಹಮ್ಮದ್ ರೌಫ್ ಎ. ಮತ್ತು ಚಾಸಾ.*2* ಕುಃ ಮಾನಸ ರವರು ಇನ್ಸ್ಟಾಗ್ರಾಮ್ ಮುಖೇನ ಒಬ್ಬರಿಗೊಬ್ಬರು ಪರಿಚಯಸ್ಥರಾಗಿದ್ದು ನಂತರದಲ್ಲಿ *1* ನೇ ಆರೋಪಿತನು ಆತನ ಮೊಬೈಲ್ ನಂಬರ್ *9108532414* ರಿಂದ ಚಾಸಾ.*2* ರವರು ಬಳಕೆ ಮಾಡುತ್ತಿದ್ದ ಮೊಬೈಲ್ ನಂಬರ್ *7624848025* ರ ಮುಖೇನ ಕರೆ ಮತ್ತು ಮೆಸೇಜ್ ಮುಖೇನ ಸಂಪರ್ಕದಲ್ಲಿದ್ದು, ಇಬ್ಬರು ಆತ್ಮೀಯರಾಗಿದ್ದ ಅವಧಿಯಲ್ಲಿ ಒಟ್ಟಿಗೆ ಕೆಲವು ಖಾಸಗಿ ಫೋಟೋಗಳನ್ನು ತೆಗೆದುಕೊಂಡಿದ್ದು, *2002* ನೇ ಸಾಲಿನಲ್ಲಿ ಚಾಸಾ.*2* ರವರು *1* ನೇ ಆರೋಪಿಯಿಂದ ಸಂಪರ್ಕ ಕಡಿಮೆ ಮಾಡಿಕೊಂಡಿದ್ದು, ಇದರಿಂದ ಚಾಸಾ.*2* ರವರ ಮೇಲೆ ದ್ವೇಷವನ್ನಿಟ್ಟುಕೊಂಡು ಈ ಹಿಂದೆ ಚಾಸಾ.*2* ರವರೊಂದಿಗೆ ತೆಗೆದುಕೊಂಡಿದ್ದ ಅರೆನಗ್ನ ಫೋಟೋಗಳನ್ನು ಚಾಸಾ.*2* ರವರ ವಾಟ್ಸಪ್ ನಂಬರ್ *7624848025* ಗೆ ಕಳುಹಿಸಿ ತನ್ನೊಂದಿಗೆ ಮಾತನಾಡದೇ ಇದ್ದರೆ ಈ ಫೋಟೋಗಳನ್ನು ನಿನ್ನ ಅಣ್ಣ ಮತ್ತು ಫ್ರೆಂಡ್ಸ್ ಗಳಿಗೆ ಕಳುಹಿಸುವುದಾಗಿ ಬೆದರಿಕೆ ಹಾಕಿರುತ್ತೀರಿ. ಇದರಿಂದಾಗಿ *1* ನೇ ಆರೋಪಿಯಾದ ನೀವು ಭಾ. ದಂ. ಸಂ. ಕಲಂ 353 (ಡಿ), 353(ಡಿ)(2), ಹಾಗೂ Section

67, 67A, 66(E) of the Information Technology Act-2000 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ

ಮುಂದುವರೆದು ಚಾಸಾ.*2* ರವರು *1*ನೇ ಆರೋಪಿಯೊಂದಿಗಿನ ಸಂಪರ್ಕ ಕಡಿತಗೊಳಿಸಿಕೊಂಡಿದ್ದರೂ*, 1*ನೇ ಆರೋಪಿ ಚಾಸಾ.*2* ರವರನ್ನು ಅಂತರ್ಜಾಲದಲ್ಲಿ ಹಿಂಬಾಗಲಿಸಿಕೊಂಡು *2022*ನೇ ಸಾಲಿನ ಸೆಪ್ಟೆಂಬರ್ ಮಾಹೆಯಲ್ಲಿ ಆರೋಪಿಯು *QATAR* ದೇಶದಲ್ಲಿದ್ದಾಗ ಚಾಸಾ.*2* ರವರಿಗೆ ಹಾನಿಯನ್ನುಂಟು ಮಾಡುವ ಉದ್ದೇಶದಿಂದ *Instagram user id: kathu_mzi* ಮತ್ತು *user_found20* ರಿಂದ ಚಾಸಾ.*1* ಮನೋಜ್ ರವರ *Instagram uder id: manoj_gowda_sj* ಗೆ ಆರೋಪಿಯು ಮಾನಸರವರೊಂದಿಗೆ ತೆಗೆದುಕೊಂಡ ಖಾಸಗಿ ಫೋಟೋಗಳನ್ನು ಹಾಕಿರುವುದು ಹಾಗೂ ತನ್ನ *Instagram user id: kathu_mzi* ಮತ್ತು *user_found20* ಗಳಲ್ಲಿ ಸದರಿ ಫೋಟೋಗಳನ್ನು ಪ್ರಸಾರ ಮಾಡಿ ಚಾಸಾ.*2* ರವರ ಮಾನಸಿಕ ನೆಮ್ಮದಿಗೆ ಭಂಗವನ್ನುಂಟು ಮಾಡಿ*,* ಭಾ.ದಂ.ಸಂ. ಕಲಂ ***504*** ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ*.*

ಪ್ರಃ1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?
ಉಃ ಆ-1 ತಿಳಿಯಿತು.

ಪ್ರಃ2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉಃ ಆ-1 ವಿಚಾರಣೆಯಾಗಬೇಕು.

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 18.03.2026

ಸಹಿ/- 18.03.2026.

(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
*ಪ್ರದನ್ಯಾದಂಃ ಕೊಪ್ಪ.*